# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂ. | 635 |
| ಮಾನ್ಯ ಸದಸ್ಯರ ಹೆಸರು | ಶ್ರೀ ಡಿ.ಟಿ.ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದವರು | ಅಬಕಾರಿ ಸಚಿವರು |
| ಉತ್ತರಿಸಬೇಕಾದ ದಿನಾಂಕ | 11.12.2025 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿ ವಿವಿಧ ಯೋಜನೆಗಳಲ್ಲಿ ಮಂಜೂರಾಗಿರುವ ಬಾರ್‌ಗಳ ಮತ್ತು ಎಂ.ಆರ್.ಪಿ ಗಳ ಸಂಖ್ಯೆ ಎಷ್ಟು; | ರಾಜ್ಯದಲ್ಲಿ ದಿನಾಂಕ:31.10.2025ರ ಅಂತ್ಯಕ್ಕೆ ಕಾರ್ಯ ನಿರ್ವಹಿಸುತ್ತಿರುವ ಸಿಎಲ್-2, ಸಿಎಲ್-9 ಮತ್ತು ಸಿಎಲ್-11ಸಿ ಸನ್ನದುಗಳ ವಿವರಗಳು ಕೆಳಕಂಡಂತಿರುತ್ತದೆ.<br><br>**ಕ್ರ. ಸಂ** / **ಸನ್ನದಿನ ವಿಧ** / **ಕಾರ್ಯನಿರ್ವಹಿಸುತ್ತಿರುವ ಸನ್ನದುಗಳ ಸಂಖ್ಯೆ**<br>01 / ಸಿಎಲ್-2 / 4005<br>02 / ಸಿಎಲ್-9 / 3654<br>03 / ಸಿಎಲ್-11ಸಿ / 1076 |
| ಆ. | ಪ್ರಸ್ತುತ ವರ್ಷ ಹೊಸದಾಗಿ ಎಷ್ಟು ಅಬಕಾರಿ ಅಂಗಡಿಗಳನ್ನು ಮಂಜೂರು ಮಾಡಲಾಗುವುದು; | ಪ್ರಸ್ತುತ ರಾಜ್ಯದಲ್ಲಿ ಸಿಎಲ್-4, ಸಿಎಲ್-6ಎ, ಸಿಎಲ್-7, ವೈನ್ ಟ್ಯಾವರ್ನ್, ವೈನ್ ಬೊಟೀಕ್, ಹೊಂದಿಕೊಂಡಂತೆ ಆರ್.ವಿ.ಬಿ ಮತ್ತು ಮೈಕ್ರೋಬ್ರೀವರಿ ಸನ್ನದುಗಳನ್ನು ಹೊಸದಾಗಿ ಮಂಜೂರು ಮಾಡಲಾಗುತ್ತಿದೆ.<br><br>ಮೇಲ್ಕಂಡ ಸನ್ನದು ಮಂಜೂರಾತಿ ಸಂಬಂಧ ಪ್ರತಿ ವರ್ಷ ಇಂತಿಷ್ಟೇ ಸನ್ನದುಗಳನ್ನು ಮಂಜೂರು ಮಾಡಬೇಕೆಂದು ಯಾವುದೇ ನಿರ್ಧಿಷ್ಟ ನಿಯಮ ಇರುವುದಿಲ್ಲ ಹಾಗೂ ಯಾವುದೇ ಗುರಿ ನಿಗದಿಪಡಿಸಿರುವುದಿಲ್ಲ. ಸನ್ನದು ಮಂಜೂರಾತಿ ಕೋರಿ ಸ್ವೀಕೃತವಾಗುವ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ಸನ್ನದು ಮಂಜೂರು ಮಾಡಲಾಗುತ್ತದೆ. |

<table>
<tr>
<td>ಇ.</td>
<td>ಈ ಅಂಗಡಿಗಳಿಗಾಗಿ ನಿಗದಿಪಡಿಸಿರುವ ಸರ್ಕಾರಿ ಶುಲ್ಕ ಎಷ್ಟು: ಇದರಿಂದ ಸರ್ಕಾರಕ್ಕೆ ಬರಬಹುದಾದ ಆದಾಯ ಎಷ್ಟು:</td>
<td>ಪ್ರಸ್ತುತ ರಾಜ್ಯದಲ್ಲಿ ಮಂಜೂರು ಮಾಡಲಾಗುತ್ತಿರುವ ಸಿಎಲ್-4, ಸಿಎಲ್-6ಎ, ಸಿಎಲ್-7, ವೈನ್ ಟ್ಯಾವರ್ನ್, ವೈನ್ ಬೊಟೀಕ್, ಹೊಂದಿಕೊಂಡಂತೆ ಆರ್.ವಿ.ಬಿ ಮತ್ತು ಮೈಕ್ರೋಬ್ರೀವರಿ ಸನ್ನದುಗಳಿಗೆ ಅನ್ವಯವಾಗುವ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.<br><br>
ಸನ್ನದು ಮಂಜೂರಾತಿ ಸಂಬಂಧ ಪ್ರತಿ ವರ್ಷ ಇಂತಿಷ್ಟೇ ಸನ್ನದುಗಳನ್ನು ಮಂಜೂರು ಮಾಡಬೇಕೆಂದು ಯಾವುದೇ ಗುರಿ ನಿರ್ದಿಷ್ಟಪಡಿಸಿದೇ ಇರುವುದರಿಂದ ಸನ್ನದು ಮಂಜೂರಾತಿಯಿಂದ ಸಂಗ್ರಹಣೆಯಾಗಬಹುದಾದ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕಗಳನ್ನು ನಿಗದಿಪಡಿಸಿರುವುದಿಲ್ಲ.<br><br>
ಸನ್ನದು ಮಂಜೂರಾತಿ ಮತ್ತು ಸನ್ನದು ನವೀಕರಣದಿಂದ ಕಳೆದ ಮೂರು ವರ್ಷಗಳಲ್ಲಿ ಸರ್ಕಾರಕ್ಕೆ ಸಂದಾಯವಾಗಿರುವ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕಗಳ ವಿವರಗಳು ಈ ಕೆಳಕಂಡಂತಿರುತ್ತದೆ.<br><br>
<table>
<tr><th>ಕ್ರ.ಸಂ</th><th>ವರ್ಷ</th><th>ಸಂಗ್ರಹಣೆಯಾಗಿರುವ ರಾಜಸ್ವ (ರೂ.ಕೋಟಿಗಳಲ್ಲಿ)</th></tr>
<tr><td>01</td><td>2022-23</td><td>766.87</td></tr>
<tr><td>02</td><td>2023-24</td><td>775.00</td></tr>
<tr><td>03</td><td>2024-25</td><td>822.15</td></tr>
</table>
</td>
</tr>
<tr>
<td>ಈ.</td>
<td>ರಾಜ್ಯಕ್ಕೆ ಬರುವ ಆದಾಯದಲ್ಲಿ ಅಬಕಾರಿ ಯೋಜನೆಯಿಂದ ಶೇಖಡಾವಾರು ಆದಾಯ ಎಷ್ಟು?</td>
<td>2025-2026ನೇ ಸಾಲಿನಲ್ಲಿ ರಾಜ್ಯಕ್ಕೆ ಬರುವ ಸ್ವಂತ ತೆರಿಗೆ ಆದಾಯದಲ್ಲಿ ಅಬಕಾರಿ ಇಲಾಖೆಯಿಂದ ಶೇ.20ರಷ್ಟು ಆದಾಯ ಇರುತ್ತದೆ.</td>
</tr>
</table>

**ಆಇ 110 ಇಎಲ್‌ಕ್ಯೂ2025**

**(ಆರ್.ಬಿ.ತಿಮ್ಮಾಪುರ)**
**ಅಬಕಾರಿ ಸಚಿವರು**

# ದಿನಾಂಕ:01-07-2025 ರಿಂದ ಅನ್ವಯವಾಗುವ ಸನ್ನದು ಶುಲ್ಕ ಮತ್ತು ಹೆಚ್ಚುವರಿ ಸನ್ನದು ಶುಲ್ಕಗಳ ವಿವರಗಳು

| ಕ್ರ.ಸಂ | ವಿವರ | ಸನ್ನದು ಶುಲ್ಕ | ಹೆಚ್ಚುವರಿ ಸನ್ನದು ಶುಲ್ಕ | ಒಟ್ಟು |
|---|---|---|---|---|
| | **ಕ್ಲಬ್ ಸನ್ನದುಗಳು (ಸಿಎಲ್-4)** | | | |
| 1 | ಅ) 20 ಲಕ್ಷಗಳಿಗಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಮಹಾನಗರ ಪಾಲಿಕೆ ಪ್ರದೇಶಗಳು | 9,75,000 | 1,46,250 | 11,21,250 |
| | ಆ) ಇತರೆ ಮಹಾನಗರ ಪಾಲಿಕೆ ಪ್ರದೇಶಗಳು | 7,50,000 | 1,12,500 | 8,62,500 |
| | ಇ) ನಗರ ಸಭೆ ಪ್ರದೇಶಗಳು | 6,00,000 | 90,000 | 6,90,000 |
| | ಈ) ಪಟ್ಟಣ ಪುರಸಭೆ ಪ್ರದೇಶಗಳು / ಪಟ್ಟಣ ಪಂಚಾಯಿತಿ ಪ್ರದೇಶಗಳು | 3,00,000 | 45,000 | 3,45,000 |
| | ಉ) ಇತರೆ ಪ್ರದೇಶಗಳು | 3,00,000 | 45,000 | 3,45,000 |
| | | | | |
| 2 | **ಸ್ಟಾರ್ ಹೋಟೆಲ್ ಸನ್ನದುಗಳು (ಸಿಎಲ್-6ಎ)** | 15,00,000 | 2,25,000 | 17,25,000 |
| | | | | |
| | **ಬೋರ್ಡಿಂಗ್ ಮತ್ತು ಲಾಡ್ಜಿಂಗ್ ಸನ್ನದುಗಳು (ಸಿಎಲ್-7)** | | | |
| 3 | ಅ) 20 ಲಕ್ಷಗಳಿಗಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಮಹಾನಗರ ಪಾಲಿಕೆ ಪ್ರದೇಶಗಳು | 12,75,000 | 1,91,250 | 14,66,250 |
| | ಆ) ಇತರೆ ಮಹಾನಗರ ಪಾಲಿಕೆ ಪ್ರದೇಶಗಳು | 11,25,000 | 1,68,750 | 12,93,750 |
| | ಇ) ನಗರ ಸಭೆ ಪ್ರದೇಶಗಳು | 8,25,000 | 1,23,750 | 9,48,750 |
| | ಈ) ಪಟ್ಟಣ ಪುರಸಭೆ ಪ್ರದೇಶಗಳು / ಪಟ್ಟಣ ಪಂಚಾಯಿತಿ ಪ್ರದೇಶಗಳು | 7,50,000 | 1,12,500 | 8,62,500 |
| | ಉ) ಇತರೆ ಪ್ರದೇಶಗಳು | 6,00,000 | 90,000 | 6,90,000 |
| | | | | |
| 4 | ಹೊಂದಿಕೊಂಡಂತೆ ಆರ್.ವಿ.ಬಿ ಸನ್ನದುಗಳು | 22,500 | 3,375 | 25,875 |
| 5 | ವೈನ್ ಬೊಟೀಕ್ ಸನ್ನದುಗಳು | 5,000 | 750 | 5,750 |
| 6 | ವೈನ್ ಟ್ಯಾವರ್ನ್ ಸನ್ನದುಗಳು | 1,000 | 150 | 1,150 |
| 7 | ಮೈಕ್ರೊ ಬ್ರೀವರಿ ಸನ್ನದುಗಳು | 2,00,000 | 30,000 | 2,30,000 |